MYSORE LEGISLATIVE ASSEMBLY.

TENTH DAY.

Thursday, 21st October 1954.

The House met in the Assembly Hall, Old Public Offices, Bangalore, at Twelve of the Clock.

Mr. SPEAKER (Sri H. S. RUDRAPPA, B.SC., LL.B.) in the Chair.

QUESTIONS AND ANSWERS

Arrack Shop in Kalasipalyam (Shifting)

Q.—178. Sri P. R. RAMAIYA (Basavangudi).—

Will the Government be pleased to state :—

(*a*) whether it has come to their notice that the arrack shop situated in Kalasipalyam, Bangalore City, is causing much inconvenience and disturbance also to the people living in that area ;

(*b*) whether it has also come to their notice that on account of the existence of the arrack shop there, much annoyance is created to the people going to and returning from the Krishnarajendra Market in the evenings ;

(*c*) whether they will consider the advisability of shifting the arrack shop from there to some other place ?

A.—Sri T. CHANNIAH (Minister for Public Health and Local Self-Government).—

(*a*) Yes.
(*b*) Yes.
(*c*) This will be examined.

ಶ್ರೀ ಪಿ. ಆರ್. ರಾಮಯ್ಯ.—ಸ್ವಾಮಿ, 'ಎ' ಭಾಗಕ್ಕೆ ಉತ್ತರವಾಗಿ ಸರ್ಕಾರದ ಗಮನಕ್ಕೆ ಬಂದಿದೆಯೆಂದು ತಿಳಿಸಿದ್ದೀರಿ. ಇದರ ಬಗ್ಗೆ cases ಎಷ್ಟಾಗಿವೆ ?

ಶ್ರೀ ಟಿ. ಚನ್ನಯ್ಯ.—ಅವು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಈ ಅಂಗಡಿ ರಾತ್ರಿ ಎಷ್ಟು ಗಂಟೆಯವರೆಗೆ ತೆರೆದಿರುತ್ತದೆ ?

ಶ್ರೀ ಟಿ. ಚನ್ನಯ್ಯ.—ರಾತ್ರಿ 9 ಗಂಟೆಯವರೆಗೆ.

ಶ್ರೀ ಪಿ. ಆರ್. ರಾಮಯ್ಯ.—ಇದಕ್ಕೆ ಸಮೀಪದಲ್ಲಿಯೇ slum area ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಪಿ. ಆರ್. ರಾಮಯ್ಯ.—ಅಲ್ಲಿ ವಾಸಮಾಡುತ್ತಿರುವ ನಿವಾಸಿಗಳಿಗೆ ರಾತ್ರಿ ಹೊತ್ತು ಈ ಕುಡಿತದ ವರ ಜಗಳದಿಂದ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಜಗಳವಾಗಿರುವುದು ನಮ್ಮ ಗಮನಕ್ಕೆ ಬಂದಿಲ್ಲ ; ಕುಡಿತಕ್ಕೆ ಸಿಕ್ಕಿಬಿದ್ದವರು ಆ ರಸ್ತೆಗಳಲ್ಲಿ ತಿರುಗಾಡುತ್ತಾರೆಂಬುದು ಗಮನಕ್ಕೆ ಬಂದಿದೆ.

ಶ್ರೀ ಪಿ. ಆರ್ ರಾಮಯ್ಯ.—ಈ ಅಂಗಡಿಯನ್ನು ಅಲ್ಲಿಂದ ತೆಗೆದುಹಾಕಬೇಕೆಂದು ಅನೇಕ ವರ್ಷಗಳಿಂದ ವರ್ಷ ವರ್ಷವೂ ಸಹ ಸರ್ಕಾರವನ್ನು ಅರ್ಜಿಗಳ ಮೂಲಕ ಒತ್ತಾಯ ಮಾಡಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಅರ್ಜಿಗಳು ಬಂದಿವೆ. ಈ ವಿಚಾರದಲ್ಲಿ ಹಿಂದೆ ಇದ್ದ ಬಸ್ ಸ್ಟ್ಯಾಂಡ್ ಜಾಗವನ್ನು ಇಲ್ಲಿಗೆ ಬದಲಾವಣೆ ಮಾಡಬೇಕೆಂದು ಕ್ರಮ ಜರುಗಿತ್ತು. ಆದರೆ ಕಾರ್ಪೊರೇಷನ್ನಿನವರು ಈ ಜಾಗವನ್ನು ಬೇರೆ ಉದ್ದೇಶಕ್ಕೆ ಕೊಟ್ಟರು. ಈಗ ಸ್ಥಳಪಿಲ್ಲದುದರ ದೆಸೆಯಿಂದ ಈ ಅಂಗಡಿಯನ್ನು ಎಲ್ಲಿಗೆ ಬದಲಾಯಿಸಬೇಕೆಂಬುದನ್ನು ಇನ್ನೂ ನಿರ್ಧರಿಸಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಕಾರ್ಪೊರೇಷನ್ನಿನವರು ಈ ಅಂಗಡಿಯನ್ನು ಬದಲಾಯಿಸಬೇಕೆಂದು ತಿಳಿಸಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ತಿಳಿಸಿರುತ್ತಾರೆ ; ಜನರೂ ಸಹ ತಿಳಿಸಿರುತ್ತಾರೆ. ಆದರೆ ಇದಕ್ಕೆ ಜಾಗ ಯಾವುದು ಎಂಬುದನ್ನು ಕಾರ್ಪೊರೇಷನ್ನಿನವರು ತೀರ್ಮಾನ ಮಾಡಿಲ್ಲ.

ಶ್ರೀ ಆರ್. ಅನಂತರಾಮ್.—ಇದಕ್ಕೆ ಬೇರೆ ಜಾಗ ಸಿಕ್ಕದೇ ಇದ್ದರೆ ಯಾವುದಾದರೂ ಮನೆಯನ್ನು ಅಕ್ವೈರ್ ಮಾಡಿಕೊಳ್ಳಲಾಗುತ್ತದೆಯೇ ?

ಶ್ರೀ ಟಿ. ಚನ್ನಯ್ಯ.—ಇದಕ್ಕೆ ಸರಿಯಾದ ಸ್ಥಳ ಸಿಕ್ಕದೇ ಇರುವುದರಿಂದ ಅದೇ ಸ್ಥಳದಲ್ಲಿದೆ.

Prohibition Offences (K. G. F.)

Q.—328. Sri P. M. SWAMI DURAI (Kolar Gold Fields—Scheduled Castes).—

Will the Government be pleased to state :—

(*a*) the number of prohibition offences in the State for the year 1952 and 1953 ;

(*b*) the amount of money recovered as fines in the above two years ;